# SSLC-PUC ವಿದ್ಯಾರ್ಥಿಗಳಿಗೆ ಪ್ಲ್ಯಾನರ್

ಪರೀಕ್ಷೆ ಸಮೀಪಿಸಿದಂತೆ ವಿದ್ಯಾರ್ಥಿಗಳ ಓದಿನ ಬಗ್ಗೆ ಎಲ್ಲ ದಿಕ್ಕುಗಳಿಂದಲೂ ಹೆಚ್ಚಿನ ಮುತುವರ್ಜಿ ವ್ಯಕ್ತವಾಗುತ್ತದೆ. ಆದರೆ ಪರೀಕ್ಷೆಯ ಸಿದ್ಧತೆ ಶೈಕ್ಷಣಿಕ ವೈರ್ಷದ ಆರಂಭದಿಂದ ಕೊನೆಯವರೆಗೂ ನಿರಂತರವಾಗಿ ನಡೆಯಬೇಕಾದ ಪ್ರಕ್ರಿಯೆ. ಆರಂಭದಲ್ಲಿ ವಿದ್ಯಾರ್ಥಿಯ ಸಿದ್ಧತೆ ಸಮರ್ಪಕವಾಗಿದ್ದರಷ್ಟೇ ವರ್ಷದ ಕೊನೆಯ ಫಲಿತಾಂಶ ಉತ್ತಮವಾಗಿರಲು ಸಾಧ್ಯ. ಈ ಹಿನ್ನೆಲೆಯಲ್ಲಿ, ಎಸ್ಎಸ್ಎಲ್ಸಿ–ಪಿಯುಸಿ ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ವರ್ಷವನ್ನು ಹೇಗೆ ರೂಪಿಸಿಕೊಳ್ಳುವುದು ಹೇಗೆ ಎನ್ನುವುದರ ಬಗ್ಗೆ ಮಾರ್ಗದರ್ಶನ ನೀಡುವ, 'ಸುಧಾ' ಶೈಕ್ಷಣಿಕ ಕಳಕಳಿಯ ವಿಶೇಷ ಲೇಖನ ಇಲ್ಲಿದೆ. **ವಿದ್ಯಾರ್ಥಿಗಳ ಜೊತೆಗೆ ಪೋಷಕರು ಹಾಗೂ ಶಿಕ್ಷಕರು ಕೂಡ ಓದಬೇಕಾದ ಬರಹವಿದು.**



ತಿರುಮಲ (ಕಾಲ್ಪನಿಕ ಹೆಸರು)ನಿಗೆ ಬ್ಯಾಂಕ್‌ನಲ್ಲಿ ಖಾತೆ ತೆರೆಯಬೇಕಾಗಿತ್ತು. ಈಗಷ್ಟೆ ಅವನು ಎಸ್ಎಸ್ಎಲ್ಸಿ 625ಕ್ಕೆ 590 ಅಂಕಗಳನ್ನು ಪಡೆದು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣನಾಗಿದ್ದ. ಬ್ಯಾಂಕಿಗೆ ಹೋಗಿ ಖಾತೆ ತೆರೆಯಲು ಅರ್ಜಿ ಫಾರಂ ಕೇಳಿದ. ಬ್ಯಾಂಕಿನವರು 'ಯಾವ ಖಾತೆಯನ್ನು ತೆರೆಯಬೇಕಪ್ಪಾ?' ಎಂದು ಕೇಳಿದರು. ತಿರುಮಲ ತಡವರಿಸುತ್ತಾ 'ನನಗೆ ಗೊತ್ತಿಲ್ಲ' ಎಂದ. ನಂತರ ಬ್ಯಾಂಕ್ ಪ್ರಬಂಧಕರು ತಿರುಮಲನನ್ನು ಕರೆದು ಬ್ಯಾಂಕ್‌ನಲ್ಲಿ ಯಾವ ಖಾತೆಗಳೆಲ್ಲ ಇರುತ್ತವೆ ಎಂಬುದನ್ನು ವಿವರಿಸಿ, ಅವನಿಗೆ ಬೇಕಾದ ಉಳಿತಾಯ ಖಾತೆಯ ಅರ್ಜಿ ಫಾರಂ ಅನ್ನು ನೀಡಿದರು. ಆದರೆ ತಿರುಮಲನಿಗೆ ಅರ್ಜಿ ಫಾರಂ ತುಂಬಲು ಗೊತ್ತಿಲ್ಲ. ಅದಕ್ಕೂ, ಬ್ಯಾಂಕಿನವರೇ ಮತ್ತೆ ಸಹಾಯವನ್ನು ಮಾಡಬೇಕಾಯಿತು. ವಿಶೇಷದ ಸಂಗತಿಯೆಂದರೆ ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ ಕೇಳಿದ, 'ಬ್ಯಾಂಕ್ ಖಾತೆಯ ವಿಧಗಳು ಯಾವುವು? ಬ್ಯಾಂಕಿನಲ್ಲಿ ಖಾತೆಯನ್ನು ಹೇಗೆ ತೆರೆಯಬೇಕು?' ಎಂಬ ಪ್ರಶ್ನೆಗೆ ತಿರುಮಲ ಸರಿಯಾಗಿಯೇ ಉತ್ತರಿಸಿ ಪೂರ್ಣಾಂಕವನ್ನು ಪಡೆದಿದ್ದ!

ಈಗಷ್ಟೆ ಎಸ್ಎಸ್ಎಲ್ಸಿ – ಪಿ.ಯು.ಸಿ.ಗೆ ಪ್ರವೇಶಿಸಿರುವ ವಿದ್ಯಾರ್ಥಿಗಳು ಮೇಲಿನ ಘಟನೆಯ ತಾತ್ಪರ್ಯವನ್ನು ಅರ್ಥ ಮಾಡಿಕೊಳ್ಳಬೇಕು.

## ಪರೀಕ್ಷೆ ಮತ್ತು ಅಂಕದ ಪರಿಕಲ್ಪನೆಗಳು

ಪರೀಕ್ಷೆಯಲ್ಲಿ ಪಡೆಯುವ ಅಂಕಗಳೇ ಜೀವನದ ನಿರ್ಧಾರಕಗಳೆಂದು ಭಾವಿಸುವ ಒಂದು ಚಿಂತನೆ ನಮ್ಮಲ್ಲಿ ವ್ಯಾಪಕವಾಗಿ ಇದೆ. ಹಾಗೆಯೇ ಅಂಕಗಳಿಗೆ ಏನೂ ಮಹತ್ವವಿಲ್ಲ; ಶಾಲೆಗೇ ಹೋಗದವರು ಕೂಡ ದೊಡ್ಡ ಸಾಧನೆ ಮಾಡಿದ್ದಾರೆ ಎಂಬ ಚಿಂತನೆಯೂ ಇದೆ. ಈ ಎರಡು ಚಿಂತನೆಗಳಲ್ಲಿ ಯಾವುದನ್ನೇ ಅವಲಂಬಿಸಿದರೂ ವಿದ್ಯಾರ್ಥಿಗಳು ಕಲಿಕೆಯಲ್ಲಿ ತಪ್ಪು ಹೆಜ್ಜೆ ಇಡುತ್ತಾ ಹೋಗುತ್ತಾರೆ.

ಪರೀಕ್ಷೆಯ ಅಂಕಗಳು ಮಾತ್ರವೇ ಜೀವನದ ನಿರ್ಧಾರಕಗಳೆಂದು ವಿದ್ಯಾರ್ಥಿಗಳು ಭಾವಿಸಿದರೆ ಅವರು ಕಲಿಕೆಗೆ ಪ್ರಾಮುಖ್ಯತೆಯನ್ನು ನೀಡುವುದಿಲ್ಲ. ಬದಲು ಪರೀಕ್ಷೆಗೆ ಮಾತ್ರ ಪ್ರಾಮುಖ್ಯತೆಯನ್ನು ನೀಡುತ್ತಾರೆ. ಅಂತಹ ವಿದ್ಯಾರ್ಥಿಗಳಲ್ಲಿ ಉನ್ನತ ಅಂಕಗಳ ನಿರೀಕ್ಷೆ ಉಳ್ಳವರು ವರ್ಷದ ಆರಂಭದಿಂದಲೂ ಪ್ರಶ್ನೋತ್ತರಗಳ ಅಭ್ಯಾಸಕ್ಕೆ ಹಟ ತೊಟ್ಟುಬಿಡುತ್ತಾರೆ. ತಾನು ಉತ್ತೀರ್ಣನಾದರೆ ಸಾಕು ಅಥವಾ ತಾನೇನು ಬಹಳ ದೊಡ್ಡ ಅಂಕಗಳನ್ನು ಪಡೆಯಬಲ್ಲವನಲ್ಲ ಎಂದು ಭಾವಿಸುವ ವಿದ್ಯಾರ್ಥಿಗಳು ವರ್ಷಾಂತ್ಯದ ಕೊನೆಯ ತಿಂಗಳಿನವರೆಗೂ ಅಭ್ಯಾಸವನ್ನು ಗಂಭೀರವಾಗಿ ತೆಗೆದುಕೊಳ್ಳುವುದೇ ಇಲ್ಲ. ಕೊನೆಯ ಹಂತದಲ್ಲಿ ಅವಸರವಸರವಾಗಿ ಪರೀಕ್ಷೆಗೆ ಸಿದ್ಧರಾಗುತ್ತಾರೆ. ವಿದ್ಯಾರ್ಥಿಗಳ